# ಗೃಹರಕ್ಷಕ ದಳ: ಅರ್ಜಿ ಆಹ್ವಾನ

Karnataka Help.in

ಯಾದಗಿರಿ: ಖಾಲಿ ಇರುವ ಗೃಹರಕ್ಷಕರ ಸ್ವಯಂ ಸೇವಕ ಸದಸ್ಯರ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಗೃಹರಕ್ಷಕ ದಳದ ಆಯ್ಕೆ ಸಮಿತಿ ಸಮಾದೇಷ್ಟರು ಹಾಗೂ ಸದಸ್ಯ ಕಾರ್ಯದರ್ಶಿ ಅರುಣ ಕುಮಾರ ತಿಳಿಸಿದ್ದಾರೆ.

ಜಿಲ್ಲೆಯ ಯಾದಗಿರಿ, ಶಹಾಪುರ, ಸುರಪುರ, ಕೆಂಭಾವಿ, ಹುಣಸಗಿ, ಗುರುಮಠಕಲ್, ಸೈದಾಪುರ ಹೀಗೆ ವಿವಿಧ ತಾಲ್ಲೂಕು ಹಾಗೂ ಉಪ ಘಟಕಗಳಲ್ಲಿ ಖಾಲಿ ಇರುವ 126 ಸ್ವಯಂ ಸೇವಕ ಗೃಹರಕ್ಷಕ, ಗೃಹರಕ್ಷಕಿಯರನ್ನು (ಹೋಂ ಗಾರ್ಡ್) ಸಂದರ್ಶನದ ಮೂಲಕ 77 ಗೃಹರಕ್ಷಕರು ಹಾಗೂ 49 ಮಹಿಳಾ ಗೃಹರಕ್ಷಕಿಯರು ಆಯ್ಕೆ ಮಾಡಲು ಜಿಲ್ಲಾ ವ್ಯಾಪ್ತಿಗೆ ಒಳಪಡುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಫೆಬ್ರುವರಿ 17 ರಿಂದ ಅರ್ಜಿ ಪ್ರಾರಂಭವಾಗಿದೆ. ಜಿಲ್ಲಾ ಕಚೇರಿಯಲ್ಲಿ ಜಿಲ್ಲಾ ಬೋಧಕರ 89704 28778, 89715 12785 ಸಂಪರ್ಕಿಸಿ ಉಚಿತವಾಗಿ ಅರ್ಜಿಗಳನ್ನು ಪಡೆಯಬಹುದಾಗಿದೆ.

ಫೆಬ್ರುವರಿ 17 ರಿಂದ ಫೆ.26ರ ರವರೆಗೆ ಅರ್ಜಿ ಸಲ್ಲಿಸಬೇಕು. ಜಿಲ್ಲಾ ಸಮಾದೇಷ್ಟರು ಗೃಹರಕ್ಷಕ ದಳ ಕಚೇರಿ ಯಾದಗಿರಿ, ಯಾದಗಿರಿ ಜಿಲ್ಲೆ ಯಾದಗಿರಿ ಕಚೇರಿ ಸಮಯದಲ್ಲಿ ಉಚಿತವಾಗಿ ಅರ್ಜಿಗಳನ್ನು ವಿತರಿಸಲಾಗುವುದು. ಅರ್ಜಿಗಳು ಸ್ವೀಕರಿಸುವ ಕೊನೆಯ ಫೆ. 27, ವಿದ್ಯಾರ್ಹತೆ ಎಸ್ಸೆಸ್ಸೆಲ್ಸಿ ಪಾಸ್ ಆಗಿರಬೇಕು. 19 ರಿಂದ 50 ವರ್ಷ ಒಳಗಿರಬೇಕು. ಅರ್ಜಿಗಳು ವಿತರಿಸುವ ಸ್ಥಳ ಜಿಲ್ಲಾ ಸಮಾದೇಷ್ಟರು ಗೃಹರಕ್ಷಕ ದಳ ಕಚೇರಿ ಯಾದಗಿರಿ (ಉಚಿತವಾಗಿ). ದೈಹಿಕ ಅರ್ಹತೆ ಹೊಂದಿರಬೇಕು. ಜಿಲ್ಲೆಯಲ್ಲಿಯೇ ವಾಸಿಸುತ್ತಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Karnataka Help.in